# ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

<u>C.C. 20/2012</u>

PW-1

| | | |
|---|---|---|
| ಹೆಸರು | :- | ಚಂದ್ರ |
| ತಂದೆಯ ಹೆಸರು | :- | ಲೇಟ್ ಹುಚ್ಚೇಗೌಡ |
| ವಯಸ್ಸು | :- | 61 ವರ್ಷ |
| ವೃತ್ತಿ | :- | ನಿವೃತ್ತ ಎ ಎಸ್ ಐ |
| ವಾಸ ಸ್ಥಳ | :- | ಚನ್ನಪಟ್ಟಣ |
| ದಿನಾಂಕ | :- | 16.01.2020 |

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ದಂಡ ಪ್ರಕ್ರಿಯೆ ಸಂಹಿತೆ 299 ರಡಿ ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

1. ನಾನು 2016 ರಿಂದ 2019 ರಾಮನಗರ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿರುತ್ತೇನೆ.

2. ದಿನಾಂಕ 24.10.2018 ರಂದು ನ್ಯಾಯಾಲಯದ ಆದೇಶದಂತೆ 2 ನೇ ಆರೋಪಿ ಲಲಿತ್ ಬಿನ್ ಅಮೀತ್ ಚಂದ ರವರ ವಿರುದ್ದ ಪ್ರೊಕ್ಲಮೇಶನ್ ಆದೇಶವನ್ನು ಜಾರಿಗೊಳಿಸಿ ಅವರು ವಾಸಿಸುತ್ತಿದ್ದ ವಿಳಾಸಕ್ಕೆ ಹೋಗಿ ಅಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಆರೋಪಿಯ ಬಗ್ಗೆ ಸ್ಥಳೀಯರನ್ನು ವಿಚಾರಿಸಿದಾಗ ಅವರ ಬಗ್ಗೆ ಮಾಹಿತಿ ದೊರೆತಿರುವುದಿಲ್ಲ.

3. ಸಾಕ್ಷಿ ಗುರುತಿಸಿದ ಪಂಚನಾಮೆಗಳನ್ನು ನಿಪಿ-1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಜನಗಳು ಸೇರುವ ಜಾಗದಲ್ಲಿ ಅಂದರೆ ದೇವಸ್ಥಾನ, ಅಂಗಡಿ, ಹೋಟೆಲ್ ಮತ್ತು ಬಸ್ ನಿಲ್ದಾಣಗಳಲ್ಲಿ ಪ್ರೊಕ್ಲಮೇಶನ್ ಪ್ರತಿಯನ್ನು ಚಿಟಕಾಯಿಸಿರುತ್ತೇನೆ. ಅಲ್ಲದೆ ಟಾಂಟಾಂ ಕೂಡ ಮಾಡಿಸಿರುತ್ತೇವೆ. ಆದರೂ ಆರೋಪಿಗಳು ಪತ್ತೆಯಾಗಿರುವುದಿಲ್ಲ.

4. ಆರೋಪಿಗಳು ಸಿಕ್ಕಿದಲ್ಲಿ ನನಗೆ ಮಾಹಿತಿ ನೀಡುವಂತೆ ಸ್ಥಳೀಯರಿಗೆ ತಿಳಿಸಿರುತ್ತೇನೆ. ಆರೋಪಿಗಳಿಗೆ ಯಾವುದೇ ಚರ ಸ್ಥಿರ ಆಸ್ತಿ ಇರುವುದಿಲ್ಲ ಎಂಬ ಬಗ್ಗೆ ತಹಶೀಲ್ದಾರ್ ಮಾಹಿತಿ ನೀಡಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ನಿಪಿ-2 ಎಂದು ಗುರುತಿಸಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು